ಕನ್ನಡಪ್ರಭ

## ‘ಮಹಿಳಾ ಸಬಲೀಕರಣ’ ಸಂವಾದದಲ್ಲಿ ಕಿರಣ್ ಬೇಡಿ ಪ್ರತಿಪಾದನೆ

# ಮಹಿಳಾ ಜಾಲದಿಂದ ದೌರ್ಜನ್ಯ ತಡೆ ಸಾಧ್ಯ

**ಕ.ಪ್ರ.ವಾರ್ತೆ | ಬೆಂಗಳೂರು | ನ. 29**

ಕಾಲೇಜು, ಕಚೇರಿಗಳಲ್ಲಿ ನೈತಿಕ ಸ್ಥೈರ್ಯಕ್ಕಾಗಿ ಮಹಿಳೆಯರದ್ದೇ ಆದ ಜಾಲ ರೂಪುಗೊಂಡಾಗ ಲೈಂಗಿಕ ದೌರ್ಜನ್ಯದಂಥ ಪರಿಸ್ಥಿತಿ ಸಮರ್ಪಕವಾಗಿ ನಿಭಾಯಿಸಲು ಸಾಧ್ಯ ಎಂದು ನಿವೃತ್ತ ಐಪಿಎಸ್ ಅಧಿಕಾರಿ, ಸಾಮಾಜಿಕ ಕಾರ್ಯಕರ್ತೆ ಕಿರಣ್ ಬೇಡಿ ಅಭಿಪ್ರಾಯಪಟ್ಟಿದ್ದಾರೆ.

ಜೈನ್ ವಿಶ್ವವಿದ್ಯಾಲಯ ‘ಮಹಿಳಾ ಸಬಲೀಕರಣ’ ಎಂಬ ವಿಷಯ ಕುರಿತು ನಗರದ ಸಿಎಂಎಸ್ ವಾಣಿಜ್ಯ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಮಾತನಾಡಿದರು.

ಲೈಂಗಿಕ ದೌರ್ಜನ್ಯದ ಸ್ವರೂಪ ಮತ್ತು ಅದರ ವಿರುದ್ಧದ ಕಾನೂನು ಕ್ರಮಗಳ ಬಗ್ಗೆ ಮಹಿಳೆಯರಿಗೆ ಸ್ಪಷ್ಟ ಅರಿವು ಇರಬೇಕು. ಆ ಕುರಿತ ಕಾನೂನುಗಳು ಪಠ್ಯದಲ್ಲೂ ಇರಬೇಕು. ಎಲ್ಲಕ್ಕಿಂತ ಹೆಚ್ಚು, ಲೈಂಗಿಕ ದೌರ್ಜನ್ಯ ನಡೆದಾಗ ಮಹಿಳೆಯರು ಧೈರ್ಯದಿಂದ ಎದುರಿಸಬೇಕುಎಂದು ಅವರು ತಿಳಿಸಿದರು.

**ಸಬಲೀಕರಣ ಎಂದರೆ ಆರ್ಥಿಕ ಸ್ವಾತಂತ್ರ್ಯವಲ್ಲ:** ಮಹಿಳಾ ಸಬಲೀಕರಣ ಎಂದರೆ ಕೇವಲ ಆರ್ಥಿಕ ಸ್ವಾತಂತ್ರ್ಯವಲ್ಲ. ಉನ್ನತ ಶಿಕ್ಷಣ ಪಡೆದು, ವರದಕ್ಷಿಣೆ ನೀಡಿ ಮದುವೆಯಾದರೆ ಅದು ಸಬಲೀಕರಣ ಎನಿಸುವುದಿಲ್ಲ. ಮಹಿಳೆ ತಾಯ್ತನ ಹಾಗೂ ವೃತ್ತಿಪರತೆ ನಡುವೆ ಸ್ವತಂತ್ರ ಪ್ರವೃತ್ತಿಯಿಂದಉತ್ತಮ ಗೃಹಿಣಿಯಾಗಬೇಕು. ಜತೆಗೆ, ಪ್ರಚಲಿತ ವಿದ್ಯಮಾನಗಳನ್ನು ತಿಳಿದುಕೊಳ್ಳಬೇಕು ಎಂದರು. ತಮ್ಮ ಸಾಧನೆಗೆ ತಂದೆಯೇ ಪ್ರೇರಣೆ ಎಂದೂ ತಿಳಿಸಿದರು.




ಜೈನ್ ವಿಶ್ವವಿದ್ಯಾಲಯ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್ ಬೇಡಿ–ಕಾಲೇಜು ವಿದ್ಯಾರ್ಥಿನಿಯರ ಉಭಯ ಕುಶಲೋಪರಿ.

## ಆಮ್ ಆದ್ಮಿ ಬಗ್ಗೆ ಗೊತ್ತಿಲ್ಲ

**ಅ**ಣ್ಣಾ ಹಜಾರೆ ಅವರು ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಅವರ ಜತೆಯಾಗಿ ಆ ಚಳವಳಿಯಲ್ಲಿ ಭಾಗವಹಿಸಿದ್ದೆ. ಆದರೆ ಕೊನೆಗೆ ಅದೇ ಚಳವಳಿ ರಾಜಕೀಯ ತಿರುವು ಪಡೆಯಿತು ಎಂದ ಅವರು ಆಮ್ ಆದ್ಮಿ ಪಕ್ಷಕ್ಕೂ ತಮಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು. ಅಲ್ಲದೆ, ಅರವಿಂದ್ ಕೇಜ್ರಿವಾಲ್ ಅಳರ ನಿಲುವಿಗೆ ತಮ್ಮ ಸಹಮತವಿಲ್ಲ ಎಂದರು.

> ಪ್ರತಿ ಕಚೇರಿಯಲ್ಲೂ ತೇಜ್‌ಪಾಲ್ ಅಂಥವರು ಇರುತ್ತಾರೆ. ಕಾನೂನಿನ ಭಯ ಇಲ್ಲದಾಗ ಮಾತ್ರ ಅಂಥವರಿಂದ ಇಂಥ ತಪ್ಪುಗಳು ನಡೆಯುತ್ತವೆ. ಲೈಂಗಿಕ ದೌರ್ಜನ್ಯಕ್ಕೆ 10 ವರ್ಷಗಳ ಜಾಮೀನುರಹಿತ ಸಜೆ ಇದ್ದಿದ್ದರೆ ತರುಣ್ ತೇಜ್‌ಪಾಲ್ ಅಂಥವರು ಲೈಂಗಿಕ ದೌರ್ಜನ್ಯ ನಡೆಸುವ ಮುನ್ನ 10 ಬಾರಿ ಯೋಚಿಸುತ್ತಾರೆ.
>
> ■ ಕಿರಣ್ ಬೇಡಿ,
> ನಿವೃತ್ತ ಐಪಿಎಸ್ ಅಧಿಕಾರಿ